ಮೋಹನ ರಾಗ – ತಾಳ – ಆದಿತಾಳ

ಗಜಮುಖನೆ ಸಿದ್ಧಿದಾಯಕನೆ ವಂದಿಪೆ ಶರಣು ।ಪ।

ತ್ರಿಜಗ ವಂದಿತನಾದ ದೇವ ದೇವನೆ ಶರಣು
ಸುಜರಿಗೆ ವಿಘ್ನವನು ಪರಿಹರಿಪೆ ಶರಣು ।ಅ.ಪ.।

ಮಂದಮತಿಯನು ಬಿಡಿಸಿ ಚಂದ ಜ್ಞಾನವನಿತ್ತು
ಇಂದಿರೇಶನ ಪಾದ ಹೊಂದಿಪ್ಪ ತೆರದಿ
ಸುಂದರಾಂಗನೆ ನಿನ್ನ ಪದದ್ವಂದ್ವಕೆರಗುವೆನು
ಸಂದೇಹ ಮಾಡದಲೆ ಇಂದು ಕರುಣಿಪುದು ।೧।

ಹರನ ತನಯನೆ ಕರುಣಾಕರನೆ ಸುರನರ ವರದ
ಮೊರೆಯಲಾಲಿಸಿ ಎನ್ನ ಕರಗಳನೆ ಪಿಡಿದು
ಪೊರೆಯದಿದ್ದರೆ ಬಿಡೆನು ನೆರೆದೆ ನಿನ್ನಡಿಗಳನು
ತ್ವರಿತದಿಂದಲಿ ನೋಡು ಶರಣೆಂಬೆ ನಿನಗೆ ।೨।

ಸಿದ್ಧಿದಾಯಕ ನಿನ್ನ ಹೊದ್ದಿ ಮೆರೆವೆನೊ ನಾನು
ಅಬ್ಧಿಶಯನನ ಮಹಿಮೆ ಬದ್ಧದಲಿ ಪೇಳ್ವ
ಶುದ್ಧಮತಿಯನು ಕೊಟ್ಟು ಉದ್ಧರಿಸಬೇಕೆನ್ನ
ಮಧ್ವವಲ್ಲಭ ವೇಣುಕೃಷ್ಣ ಗತಿ ಪ್ರಿಯ ।೩।

ರಾ ಗ – ಆ ನ ಂ ದ ಭೈ ರ ವಿ : ತಾ ಳ : ಆ ದಿ ತಾ ಳ

ಎದುರಾರೈ ಗುರುವೆ ಸಮರಾರೈ ।ಪ।

ಮದನ ಗೋಪಾಲನ ಪ್ರಿಯ ಜಯರಾಯ ।ಅ ಪ।

ಕಡುಗರ್ಜಿಸುವ ಕೇಸರಿಯಂತೆ ನಿಮ್ಮ ವಾದ
ಗಡಣೆಯ ಕೇಳುತ ನುಡಿ ಮುಂದೋಡದೆ
ಗಡಗಡ ನಡುಗುತ ಮಾಯ್ಗೋಮಾಯ್ಗಳು
ಅಡವಿಯೊಳಡಗೋರು ನಿಮ್ಮ ಭೀತಿಯಲಿ ।೧।

ಕುಟಿಲ ಮತಗಳೆಂಬೊ ಚಟುಲಂಧಕಾರಕ್ಕೆ
ಪಟುತರ ತತ್ವಪ್ರಕಾಶಿಕೆಯೆಂತೆಂಬ
ಚಟುಲತಾಪದಿಂದ ಖಂಡಿಸಿ ತೇಜೋ
ತ್ಕಟದಿ ಮೆರೆದ ಬುಧಕಟಕಾಬ್ಜ ಮಿತ್ರ ।೨।

ಅಮಿತ ದ್ವಿಜಾವಳಿ ಕುಮುದಗರಳಿಸಿ
ವಿಮತರ ಮುಖಕಮಲಂಗಳ ಬಾಡಿಸಿ
ಸ್ವಮತರ ಹೃತ್ಸಂತಾಪಗಳೋಡಿಸಿ
ವಿಮಲ ಸುಕೀರ್ತಿಯ ಪಡೆದೆಯೋ ಚಂದ್ರ ।೩।

ವೇದಶಾಸ್ತ್ರಗಳೆಂಬೊ ಶೃಂಗಗಳಿಂದ ಸು–
ಧಾದಿ ಗ್ರಂಥಗಳೆಂಬೊ ಸ್ತನದಿಂದೊಪ್ಪುತ ತತ್ವ–
ಬೋಧನೆಯೆಂಬ ದುಗ್ಧ ಶಿಷ್ಯವತ್ಸಂಗಳಿಗೆ
ಆದರದಲಿ ಕೊಟ್ಟ ಯತಿಸುರಧೇನು ।೪।

ವ್ಯಾಸಸೂತ್ರಗಳೆಂಬ ಮಂದರವನು ವೇದ
ರಾಶಿಯೆಂಬ ವಾರಾಶಿಯೊಳಿಟ್ಟು
ಶ್ರೀ ಸರ್ವಜ್ಞರ ವಾಕ್ಯಪಾಶದಿ ಸುತ್ತಿ
ಭಾಸುರ ನ್ಯಾಯಸುಧಾ ಪಡೆದ ಯತೀಂದ್ರ ।೫।

ವನಜನಾಭನ ಗುಣಮಣಿಗಳು ಸರ್ವಜ್ಞ-
ಮುನಿಕೃತ ಗ್ರಂಥಗಳವನಿಯೊಳಗಡೆ ಸ-
ಜ್ಜನರಿಗೆ ಟೀಕಾಂಜನದಿಂದ ತೋರಿಸಿ
ಘನ ಸುಖಸಾಧನ ಮಾಡಿದ್ಯೋ ಧೀರ ।೬।

ಅರ್ಥಿಮಂದಾರ ವೇದಾರ್ಥವಿಚಾರ ಸ-
ಮರ್ಥ ಶ್ರೀಕೃಷ್ಣ ಪಾದಾಂಬುಜಲೋಲ ಪ್ರ-
ತ್ಯರ್ಥಿ ಮತ್ತೇಭಕಂಠೀರವಕ್ಷೋಭ್ಯ-
ತೀರ್ಥ ಕರಜ ಜಯತೀರ್ಥ ಯತೀಂದ್ರ ।೭।

ರಾಗ - ತಿಲಂಗ್ : ತಾಳ - ಆದಿತಾಳ

ನಮೊ ಪಾರ್ವತೀಪತಿ ನತಜನಪರ ನಮೋ ವಿರೂಪಾಕ್ಷ ।ಪ।
ರಮಾರಮಣನಲಿ ಅಮಲಭಕುತಿ ಕೊಡು ನಮೋ ವಿಶಾಲಾಕ್ಷ ।ಅ ಪ।

ನೀಲಕಂಠ ತ್ರಿಶೂಲ ಡಮರು ಹಸ್ತಾಲಂಕೃತ ರಕ್ಷ
ಫಾಲನೇತ್ರ ಕಪಾಲ ರುಂಡಮಣಿ ಮಾಲಾಧೃತ ವಕ್ಷ
ಶೀಲರಮ್ಯ ವಿಶಾಲ ಸುಗುಣಸಲ್ಲೀಲ ಸುರಾಧ್ಯಕ್ಷ
ಶ್ರೀಲಕುಮೀಶನ ಓಲೈಸುವ ಭಕ್ತಾವಳಿಗಳ ಪಕ್ಷ ।೧।

ವಾಸವನುತ ಹರಿದಾಸ ಈಶ ಕೈಲಾಸವಾಸ ದೇವ
ದಾಶರಥಿಯ ಔಪಾಸಕ ಸುಜನರ ಪೋಷಿಪ ಪ್ರಭಾವ
ಭಾಸಿಸುತಿಹುದು ಅಶೇಷ ಜೀವರಿಗೆ ಈಶನೆಂಬ ಭಾವ
ಶ್ರೀಶನಲ್ಲಿ ಕೀಲಿಸು ಮನವ ಗಿರಿಜೇಶ ಮಹಾದೇವ । ೨ ।

ಮೃತ್ಯುಂಜಯ ನಿನ್ನುತ್ತಮ ಪದಯುಗ ಭೃತ್ಯನೊ ಸರ್ವತ್ರ
ಹತ್ತಿರ ಕರೆದು ಅಪತ್ಯನಂತೆ ಪೊರೆಯುತ್ತಿರೊ ತ್ರಿನೇತ್ರ
ತೆತ್ತಿಗನಂತೆ ಕಾಯುತ್ತಿಹೆ ಬಾಣನ ಸತ್ಯದಿ ಸುಚರಿತ್ರ
ಕರ್ತೃ ಉಡುಪಿ ಸರ್ವೋತ್ತಮ ಶ್ರೀಕೃಷ್ಣನ ಪೌತ್ರ ಕೃಪಾಪಾತ್ರ । ೩ ।

ರಾ ಗ - ಕ ಲ್ಯಾ ಣಿ : ತಾ ಳ - ಅ ಟ ತಾ ಳ

ಜಾಣ ನೀನಹುದೊ ಗುರು ಮುಖ್ಯಪ್ರಾಣ ನೀನಹುದೊ । ಪ ।

ರಾಣಿ ಭಾರತೀರಮಣ ನಿನಗೆಣೆ
ಕಾಣೆ ತ್ರಿಭುವನದೊಳಗೆ ಸರ್ವ
ಪ್ರಾಣಿಗಳ ಹೃದಯದಲಿ ಮುಖ್ಯ
ಪ್ರಾಣನೆಂದೆನಿಸಿದೆಯೊ ಸ್ವಾಮಿ । ಅ ಪ ।

ಧೀರ ನೀನಹುದೊ ವಾಯುಕುಮಾರ ನೀನಹುದೊ
ಸಾರಿದವರ ಮನೋರಥಂಗಳ
ಬಾರಿಬಾರಿಗೆ ಕೊಡುವೆನೆನುತಲಿ
ಕ್ಷೀರನದೀತೀರದಲಿ ನೆಲೆಸಿಹ
ಮಾರುತಾವತಾರ ಹನುಮ । ೧ ।

ಧಿಟ್ಟ ನೀನಹುದೊ ಬೆಟ್ಟ ತಂದಿಟ್ಟವ ನೀನಹುದೊ
ರಟ್ಟೆ ಹಿಡಿದಕ್ಷಯಕುಮಾರನ
ಕುಟ್ಟಿ ದೈತ್ಯರ ಕೆಡಹಿ ಬೇಗದಿ

ಸುಟ್ಟು ಲಂಕೆಯ ಸೀತೆಗುಂಗುರ
ಕೊಟ್ಟೆ ಮೂಜಗಜೆಟ್ಟಿ ಹನುಮ । ೨ ।

ಚಂಡ ನೀನಹುದೊ ದುರಿತ ಮಾರ್ತಾಂಡ ನೀನಹುದೊ
ಕುಂಡಲವು ಕಿರಿಘಂಟೆ ಉಡಿಯಲಿ
ಪೆಂಡೆ ನೂಪುರ ಕಾಲಲಂದಿಗೆ
ತಂಡತಂಡದಿ ಕೃಷ್ಣನಂಘ್ರಿ
ಪುಂಡರೀಕಕೆ ಕೈಯ ಮುಗಿದ । ३ ।

ರಾ ಗ – ನಾ ಟಿ : ತಾ ಳ – ಝ ಂ ಪೆ ತಾ ಳ

ಜಯ ವಾಯು ಹನುಮಂತ ಜಯ ಭೀಮ ಬಲವಂತ । ಪ ।

ಜಯ ಪೂರ್ಣ ಮತಿವಂತ ಜಯ ಸಲಹೊ ಸಂತ । ಅ ಪ ।

ಅಂಜನೆಯಲಿ ಜನಿಸಿ ಅಂದು ರಾಮನ ಸೇವೆ
ನಂದದಲಿ ಮಾಡಿ ಕಪಿ ಬಲವ ಕೂಡಿ
ಸಿಂಧು ಲಂಘಿಸಿ ವನ ಭಂಗಿಸಿ ಸೀತೆ
ಗುಂಗುರವ ಕೊಟ್ಟೆ ಲಂಕಾಪುರವ ಸುಟ್ಟೆ । ೧ ।

ಹರಿಗೆ ಚೂಡಾಮಣಿಯನಿತ್ತು ಹರಿಗಳ ಕೂಡಿ
ಶರಧಿಯನು ಕಟ್ಟಿ ಅರಿಬಲವ ಕುಟ್ಟಿ
ಉರಗ ಬಂಧನದಿಂದ ಕಪಿವರರರು ಮೈಮರೆಯೆ
ಗಿರಿಯ ಸಂಜೀವನವ ತಂದು ಬದುಕಿಸಿದೆ । ೨ ।

ದ್ವಾಪರಾಂತ್ಯದಿ ಪಾಂಡು ಭೂಪನಾತ್ಮಜನೆನಿಸಿ
ಶ್ರೀಪಾರ್ಥ ಸಾರಥಿಯ ಭಜಕ ನೀನಾದೆ

ಪಾಪಿ ಮಾಗಧ ಬಕ ಕೀಚಕ ಹಿಡಿಂಬಕರ
ಕೋಪದಿಂದಲಿ ತರಿದೆ ಮೂಜಗದಿ ಮೆರೆದೆ ।೩।

ಧುರದಲಿ ದುರ್ಯೋಧನನ ಬಲವನು ತರಿದೆ
ಅರಿತು ದುಶ್ಯಾಸನನ ಒಡಲನ್ನು ಬಗೆದೆ
ಉರವ ತಪ್ಪಿಸಿ ಕೌರವನ್ನ ತೊಡೆಗಳ ಮುರಿದೆ
ಹರಿಯ ಕಿಂಕರ ಧುರಂಧರಗಾರು ಸರಿಯೆ ।೪।

ಕಲಿಯುಗದಲಿ ಕಳ್ಳರುದಿಸಿ ದುರ್ಮತಗಳನು
ಬಲಿಸಿ ಶ್ರೀಹರಿಯ ಗುಣಗಳನು ಮರೆಸಿ
ಕಲಿಯನನುಸರಿಸಲು ಗುರುವಾಗಿ ಅವತರಿಸಿ
ಖಳರ ದುರ್ಮತ ಮುರಿದೆ ಶ್ರೀಕೃಷ್ಣ ಪರನೆಂದೆ ।೫।

ರಾಗ – ರೇಗುಪ್ತಿ : ತಾಳ – ಅಟತಾಳ

ಜನುಮ ಜನುಮದಲಿ ಕೊಡು ಕಂಡ್ಯ ಹರಿಯೆ ।ಪ।

ಅನಿಮಿತ್ತ ಬಂಧು ಕೃಷ್ಣದಯದಿಂದಲೆನಗೆ ।ಅ ಪ।

ಮೆರೆವ ಊರ್ಧ್ವ ಪುಂಡ್ರ ಎರಡಾರು ನಾಮವು ।
ಕೊರಳೊಳು ತುಳಸಿಯ ವನಮಾಲೆಯು ॥
ಮೆರೆವ ಶಂಖಚಕ್ರ ಭುಜದೊಳೊಪ್ಪುವ ನಿಮ್ಮ ।
ಸ್ಮರಿಸುತ್ತ ಹಿಗ್ಗುವ ವೈಷ್ಣವ ಜನುಮವು ।೧।

ಹರಿಯೆ ಸರ್ವೋತ್ತಮ ರಾಣಿ ಲಕುಮಿ ಬೊಮ್ಮ ।
ಹರ ಇಂದ್ರಾದ್ಯಮರರು ತವ ಸೇವಕರು ॥
ವರ ತಾರತಮ್ಯ ಪಂಚಭೇದ ಸತ್ಯವೆಂದು ।
ನೆರೆ ಪೇಳುವ ವಾಯುಮತವ ಸುಜ್ಞಾನವ ।೨।

ಸಕಲ ವಿಬುಧೋತ್ತಮರಲ್ಲಿ ನಮ್ರತೆಯು ।
ಸುಖತೀರ್ಥರಲ್ಲಿ ಮುಖ್ಯ ಗುರು ಭಾವನೆಯು ॥
ಮುಕುತಿ ಪ್ರದಾಯಕ ಸಿರಿಕೃಷ್ಣ ನಿನ್ನಲ್ಲಿ ।
ಅಕಳಂಕವಾದ ನವವಿಧ ಭಕುತಿಯು ।೩।

ರಾ ಗ – ತೋ ಡಿ : ತಾ ಳ – ರೂ ಪ ಕ ತಾ ಳ

ಪೂಜೆ ಯಾತಕೊ ಮನುಜ ಪೂಜೆ ಯಾತಕೊ
ಪೂಜೆಯಲ್ಲಿ ನಿನ್ನ ಮನ ನಿಲ್ಲದಿದ್ದ ಮೇಲೆ ನಿನಗೆ ।ಪ।

ಭೂತದಯಾ ಪಶ್ಚಾತ್ತಾಪ । ನೀತಿಯೆಂಬುದು ಮತ್ತಿಲ್ಲ
ಮಾತಿನಲಿ ಜ್ಞಾನಿಯಲ್ಲ । ಕೋತಿ ಬುದ್ಧಿ ಬಿಡಲಿಲ್ಲ ।೧।

ಹಾಕುವುದು ಸಾಧು ವೇಷ । ಸಾಕುವುದು ಹಲವು ದೋಷ
ಬೇಕೆ ನಿನಗೆ ಒಳ್ಳೆ ಪದ । ಏಕೆ ಭ್ರಾಂತಿ ಉನ್ಮತ್ತ ।೨।

ಪೂಜೆಯಲಿ ಪಾಪಬುದ್ಧಿ । ಜಾಜಿ ತುಳಸಿ ಕೈಯಲಿ
ಮೂಜಗದೊಡೆಯ ಅವನು ಎಲ್ಲಿ । ಮಾರ್ಜಾಲನಂತೆ ನೋಟದಲಿ ।೩।

ಆಸೆಯನು ಬಿಡಲಿಲ್ಲ । ಶೇಷಶಯನನ ಪೂಜೆಯೆಲ್ಲ
ಗಾಸಿಪಟ್ಟು ಮಾಡುತಿಯಲ್ಲ । ಮೋಸ ಹೋಗದೆ ತಿಳಿಯೊ ಎಲ್ಲ ।೪।

ತಂದೆ ಪುರಂದರವಿಟ್ಠಲನ । ಒಂದೆ ಮನದಿ ನೆನೆಯೊ ಅಣ್ಣ
ಎಂದು ಕುಂದದ ಪದವನೀವ । ನಂದನಂದನ ತಂದೆ ಕೃಷ್ಣ ।೫।

ರಾ ಗ – ಮೋ ಹ ನ : ತಾ ಳ – ಛಾ ಪು ತಾ ಳ

ಅಂತರಂಗದಲಿ ಹರಿಯ ಕಾಣದವ ಹುಟ್ಟು ಕುರುಡನೊ ।ಪ।

ಸಂತತ ಸಿರಿಕೃಷ್ಣ ಚರಿತೆ ಕೇಳದವ । ಜಡಮತಿ ಕಿವುಡನೊ ।ಅ ಪ।

ಕುರುವೀರ ಸಖ ಕೃಷ್ಣನ ಮುಂದೆ । ಕೃಷ್ಣಾಯೆಂದು ಕುಣಿಯದವನೆ ಕುಂಟನೊ
ನರಹರಿ ಚರಣೋದಕ ಧರಿಸದ ಶಿರ । ನಾಯುಂಡ ಹೆಂಚು ಕಾಣೊ
ಹರುಷದಿಂದಲಿ ನರಹರಿಯ ಪೂಜೆಯ । ಮಾಡದವನೆ ಕೈ ಮುರಿದವನೊ
ಸುರವರ ಕೃಷ್ಣ ಪ್ರಸಾದವಿಲ್ಲದ ಊಟ। ಸೂಕರ ಭೋಜನವೊ ।೧।

ಅಮರೇಶ ಕೃಷ್ಣಗರ್ಪಿತವಲ್ಲದ ಕರ್ಮ। ಅಸತಿಯ ವ್ರತನೇಮವೊ
ರಮೆಯರಸಗೆ ಪ್ರೀತಿಯಿಲ್ಲದ ವಿತರಣೆ। ರಂಡೆ ಕೊರಳ ಸೂತ್ರವೊ
ಕಮಲನಾಭನ ಪಾಡಿ ಪೊಗಳದ ಸಂಗೀತ। ಗಾರ್ದಭ ರೋದನವೊ
ಮಮತೆಯಿಂದಲಿ ಕೇಶವಗೆ ನಮಸ್ಕಾರ । ಮಾಡದವನೆ ಮೃಗವೊ ।೨।

ಸುರಧೇನುವಿರಲಾಗಿ ಸೂಕರ ಮೊಲೆಹಾಲು ಕರೆದು ಕುಡಿಯಬೇಡವೊ
ಕರಿತುರಗವು ಇರಲಾಗಿ ಕೆಡುಹುವಂಥ । ಕತ್ತೆಯೇರಲಿ ಬೇಡವೊ
ಜರೆ ಪುಟ್ಟು ಮರಣ ತೊಡೆವ ಸುಧೆಯ ಬಿಟ್ಟು ಸುರೆಯ ಸೇವಿಸಬೇಡವೊ
ಪರಮ ಪದವನೀವ ಸಿರಿಕೃಷ್ಣನಿರಲಾಗಿ । ನರರ ಸೇವಿಸಬೇಡವೊ ।೩।

ಕೃಷ್ಣಾ ನೀ ಬೇಗನೇ ಬಾರೋ ।
ಬೇಗನೇ ಬಾರೋ ಮುಖವನ್ನೆ ತೋರೋ ॥

ಹುಟ್ಟಿದ್ದು ಮಧುರೆಲಿ ಬೆಳೆದಿದ್ದು ಗೋಕುಲ ।
ಜಲಕ್ರೀಡೆಯಾಡಿದ್ದು ಯಮುನೆಯ ತೀರ ।
ಕಾಶೀ ಪೀತಾಂಬರ ಕೈಯಲಿ ಕೊಳಲು ।
ಪೂಸೀದ ಶ್ರೀಗಂಧ ಮೈಯಳಗಮ್ಮ ।

ಉಡಿಯಲ್ಲಿ ಉಡಿಗೆಜ್ಜೆ ಬೆರಳಲಿ ಉಂಗುರ ।
ಕೊರಳಲಿ ಹಾಕಿದ ಹುಲಿಯುಗುರಮ್ಮ ।

ತಾಯಿಗೆ ಬಾಯಲಿ ಜಗವನ್ನೇ ತೋರಿದ ।
ಜಗದೋದ್ಧಾರಕ ನಮ್ಮ ಉಡುಪಿಯ ಶ್ರೀ ಕೃಷ್ಣ ॥

**ಕೊಳಲನೂದುವ ಚದುರನ್ಯಾರೆ ಪೇಳಮ್ಮಯ್ಯ ।**
ತಳಿರಂದದಿ ತಾಪೊಳೆವಕರದಿ ಪಿಡಿದು ।

ನಾದದಿ ತುಂಬಿತು ಗೋವರ್ಧನಗಿರಿ
ಯಾದವಕುಲನಭ ನೆರೆದಿತು ಖಗಕುಲ
ಸಾಧಿಸಿ ನೋಡಲು ಕೃಷ್ಣನ ಈಗಲೆ
ಸಾಧ್ಯವೇನೆ ಬೃಂದಾವನದೊಳು

ಮೇವು ಮರೆತವು ಗೋವುಗಳೆಲ್ಲವೂ
ಸಾವಧಾನದಿ ಹರಿದಳು ಯಮುನಾ
ಆವು ಕಾವುತಲಿ ಗೋವಳರೆಲ್ಲರು
ಹಾವಭಾವದಲಿ ಬೃಂದಾವನದೊಳು

ಸುರರು ಸುರಿದರಾಕಾಶದಿ ಸುಮಮಳೆ
ಸರಿದು ಪೋಗಿ ನೋಡೆ ಬೃಂದಾವನದೊಳು
ಸಾರಿ ಸಾರಿ ಶ್ರೀಕೃಷ್ಣನ ಈಗಲೆ
ತುರುಗಳ ಕಾಯ್ವ ಕದಂಬ ವನದೊಳು ।
ಕಾಳಿಂಗನಾ ಮೆಟ್ಟಿ ನಾಟ್ಯವಾಡಿದ ಕಂಜನಾಭ ಕೃಷ್ಣನು ।ಪ।

ಕಾಳಿಂಗನ ಮೆಟ್ಟಿ ಆಡಿದ ಭರದಲ್ಲಿ
ಶ್ರೀವತ್ಸ ಉರದಲ್ಲಿ ಕೊರಳಲ್ಲಿ ವನಮಾಲೆ
ತರಳತನದಲ್ಲಿ ಯಮುನೆಯ ಮಡುವಿನಲ್ಲಿ ಆಡುತ್ತಾ ಪಾಡುತ್ತಾ । ಅ.ಪ ।

ಕಾಲಲಿ ಗೆಜ್ಜೆ ಘುಲು ಘುಲುಕೆನ್ನೆ
ಫಾಲದಿ ತಿಲಕವು ಹೊಳೆಹೊಳೆ ಹೊಳೆಯುತ್ತ
ಜ್ವಲಿತ ಮಣಿಮಯ ಲಲಿತ ಪದಕಹಾರ
ಜ್ವಲಿತ ಕಾಂತಿ ಬೆಳಗುತ ದಿಕ್ಕುಗಳಲಿ । ೧ ।

ಸುರರು ದುಂದುಭಿಯ ಢಣಢಣ ಢಣರೆಂದು
ಮೊರೆಯ ತಾಳಗಲು ಝುಣಝುಣ ಝುಣರೆಂದು
ಹರಬ್ರಹ್ಮ ಸುರರು ತಥೈ ತಥೈ ಎನಲು
ನಾರದ ತುಂಬರ ಸಿದ್ಧರು ವಿದ್ಯಾ
ಧರರು ಅಂಬರದಲಿ ಆದುತ್ತ ಪಾಡಲು । ೨ ।

ಯೋಗಿಗಳೆಲ್ಲ ಜಯ ಜಯ ಜಯವೆನ್ನೆ
ಭೋಗಿಗಳೆಲ್ಲ ಭಯ ಭಯ ಭಯವೆನ್ನೆ
ನಾಗಕನ್ಯೆಯರು ಅಭಯ ಅಭಯವೆನ್ನೆ
ನಾಗಶಯನ ಸಿರಿಕೃಷ್ಣ ಜನನಿಯ ಕಂಡು
ಬೇಗನೆ ಬಿಗಿದಪ್ಪಿ ಮುದ್ದನು ತೋರಿದ । ೩ ।

ನಂಬಿ ಕೆಟ್ಟವರಿಲ್ಲವೋ ರಂಗಯ್ಯನ
ನಂಬದೆ ಕೆಟ್ಟರೆ ಕೆಡಲಿ । ಪ ।

ಅಂಬುಜನಾಭನ ಅಖಿಳ ಲೋಕೇಶನ
ಕಂಬುಕಂಧರ ಕೃಷ್ಣ ಕರುಣಾಸಾಗರನ ।ಅ.ಪ।

ತರುಳ ಪ್ರಹ್ಲಾದ ಸಾಕ್ಷಿ – ಸರಸಿಯೊಳಿದ್ದ
ಕರಿರಾಜನೊಬ್ಬ ಸಾಕ್ಷಿ
ಮರಣಕಾಲದಿ ಅಜಾಮಿಳ ಮಗನನು ಕರೆಯೆ
ಗರುಡನೇರಿ ಬಂದ ಗರುವರಹಿತನ ।೧।

ದೊರೆಯಲು ಏರಿಬಂದ ಪುತ್ರನನ್ನು
ಕೊರಳ್ಹಿಡಿದು ಹೊರಡಿಸಲು
ಅರಣ್ಯದೊಳಗವನಿದ್ದ ಸ್ಥಳದಲ್ಲಿ
ಭರದಿಂದೋಡಿ ಬಂದ ಭಕ್ತವತ್ಸಲನ್ನ ।೨।

ತರುಣಿ ದ್ರೌಪದಿ ಸೀರೆಯ ದುಶ್ಯಾಸನ
ಸರಸರ ಸೆಳೆಯುತಿರೆ
ಕರುಣಿ ತನ್ನೊಡತಿಯೊಡನೆ ಆದುವುದ ಬಿಟ್ಟು
ತ್ವರದಿ ಅಕ್ಷಯವಿತ್ತ ಸಿರಿಕೃಷ್ಣರಾಯನ ।೩।

ಕಡೆಗೋಲ ತಾರೆನ್ನ ಚಿನ್ನವೆ – ಮೊಸ
ರೊಡೆದರೆ ಬೆಣ್ಣೆ ಬಾರದು ಮುದ್ದುರಂಗ ।ಪ।

ಅಣ್ಣನ ಒಡಗೊಂಡು ಬಾರೈಯ ಸವಿ
ಬೆಣ್ಣೆಯ ಮುದ್ದೆಯ ಮೆಲುವಿರಂತೆ
ಬಣ್ಣದ ಸರವನ್ನು ಕೊರಳಲ್ಲಿ ಹಾಕುವೆ
ಚಿಣ್ಣರೊಡನೆ ಆಡಕಳುಹುವೆ ರಂಗ ।೧।

ಪುಟ್ಟ ಬಚ್ಚಿಯ ತಂದು ನಿನ್ನಯ ಚಿನ್ನದ
ತೊಟ್ಟಿಲ ಕಾಲಿಗೆ ಕಟ್ಟಿಸುವೆ
ಬಟ್ಟಲು ತುಂಬಿದ ಸಕ್ಕರೆ ನಿನಗೀವೆ
ಕಟ್ಟಾಣಿ ಮುತ್ತಿನ ಸರವನೀವೆ ।೨।

ಬಡವರ ಭಾಗ್ಯದ ನಿಧಿಯೆ ಗೋಕುಲ
ದೊಡೆಯನೆ ಮಾಣಿಕ್ಯದ ಹರಳೆ
ಕಡುಮುದ್ದು ಉಡುಪಿನ ಬಾಲಕೃಷ್ಣಯ್ಯ
ದುಡುಕು ಮಾಡುವರೇನೊ ಪೆಂಗಳೊಳುರಂಗ ।೩।